# ಈ ಕಾಲದ ಕಥನ

ಇನ್ನೊಂದು ಕಾಡಿಗೆ ಉರುವಲು ತರಲು ಹೊರಟ ರೈತನೊಬ್ಬನ ಕತೆ. ಅಡುಗೆಗಾಗಿ ಕಟ್ಟಿಗೆ ತರಲು ಕಾಡಿಗೆ ಬಂದ ಇವನು ಮರದ ಮೇಲೆ ಹತ್ತಿ ಕೂತು ಬುಡವನ್ನು ಕಡಿಯುತ್ತಿರುತ್ತಾನೆ. ಆಗ ವಿಹಾರಕ್ಕೆಂದು ಆಕಾಶದಲ್ಲಿ ಸಂಚರಿಸುತ್ತಿರುವ ಶಿವ, ಪಾರ್ವತಿ ನೋಡಿ ಇನ್ನು ಸ್ವಲ್ಪ ಹೊತ್ತಿನಲ್ಲಿ ಅವನು ಬುಡಕಡಿದು ಬಿದ್ದು ಸಾಯುತ್ತಾನಲ್ಲ ಎಂದು ಮರುಗುತ್ತಾರೆ. ಅವನು ಬೀಳುವಾಗ 'ಅಮ್ಮಾ' ಎಂದರೆ ಪಾರ್ವತಿ ರಕ್ಷಿಸುವುದಾಗಿಯೂ, 'ಅಪ್ಪಾ' ಎಂದರೆ ಶಿವ ರಕ್ಷಿಸುವುದಾಗಿಯೂ ಮಾತಾಡಿಕೊಳ್ಳುತ್ತಾರೆ. ಆದರೆ ಆತ ಅಮ್ಮಾ, ಅಪ್ಪಾ ಏನೂ ಎನ್ನದೇ 'ಅಯ್ಯಯ್ಯೋ' ಎನ್ನುತ್ತಾ ಬೀಳುತ್ತಾನೆ. ಪೊರೆಯುವ ಮೌಲ್ಯಗಳಿದ್ದೂ ಅದಕ್ಕೆ ವಿಮುಖರಾಗಿ ತಾವೇರಿ ಕುಳಿತ ಮರದ ಬುಡವನ್ನೇ ಕಡಿಯುವ ವ್ಯಕ್ತಿಯ ಈ ಕಥನ ನಮ್ಮ ಇಂದಿನ ಪರಿಸ್ಥಿತಿಗೆ ಚೆನ್ನಾಗಿ ಹೊಂದುತ್ತದೆ. ಮುಂದಿನ ಪೀಳಿಗೆಗಿರಲಿ, ನಾವು ಹೀಗೇ ವರ್ತಿಸಿದರೆ ಮುಂದಿನ ಐದು ವರ್ಷಗಳ ಬಳಿಕ ನಮ್ಮ ಬದುಕೇ ಹೇಗೆ ತೊಂದರೆಗೆ ಸಿಲುಕಿಕೊಳ್ಳಬಹುದು ಎಂಬ ಕನಿಷ್ಠ ತಿಳಿವಳಿಕೆ ಇಲ್ಲದಂತೆ ನಡೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಈ ಕತೆ ಮತ್ತೆ ಮತ್ತೆ ನೆನಪಾಗುತ್ತದೆ. ಜೊತೆಗೆ, ನಾವೇ ಹೆಣೆದುಕೊಂಡ ದ್ವೇಷ, ಮತೀಯವಾದ, ಜಾತಿವಾದ, ಪುರುಷವಾದ, ಮೂಲಭೂತವಾದಗಳ ಹುಸಿಕಥನಗಳ ಜಾಲದಲ್ಲಿ ನಾವೇ ಸಿಲುಕಿ, ನಮ್ಮ ಮಕ್ಕಳೂ ಸಿಲುಕಿ ಬದುಕಿನ ನೆಲೆಗಳನ್ನು ಧ್ವಂಸಗೊಳಿಸಿಕೊಳ್ಳುತ್ತಿರುವ ದುಃಸ್ಥಿತಿ ಕಣ್ಣಮುಂದೆ ಕುಣಿಯುತ್ತದೆ. ನಾವೇ ಸೃಷ್ಟಿಸಿರುವ ದೈತ್ಯನ ರಕ್ತದಾಹ ತೀರಿದ ಬಳಿಕವೂ ಹಸಿವು ಹಿಂಗದೇ ಅದು ನಮ್ಮನ್ನೇ ಕಬಳಿಸುವ ಭಯಾನಕ ಸನ್ನಿವೇಶ ನಮ್ಮ ಮುಂದೆ ಸೃಷ್ಟಿಯಾಗಿದೆ.

ಪ್ರಜಾಪ್ರಭುತ್ವ, ಸರ್ವಾಧಿಕಾರ, ಮಾರುಕಟ್ಟೆ, ಉದಾರವಾದ, ಸಮಾಜವಾದಗಳ ಕಥನಗಳನ್ನು ಒಳಗೊಂಡ ದೊಡ್ಡ ರಾಶಿಯ ಮುಂದೆ ಕುಳಿತ ನಾವು ನಮಗೆ ಬೇಕಾದ್ದನ್ನು ಅತ್ಯಂತ ಜಾಗರೂಕತೆಯಿಂದ ಆರಿಸಿಕೊಳ್ಳಬೇಕಾದ ತುರ್ತಿನಲ್ಲಿದ್ದೇವೆ. ಎಲ್ಲವೂ ಸಲ್ಲುವ ಈ ಸಂದರ್ಭದಲ್ಲಿ ಎಲ್ಲರನ್ನೂ ಪೊರೆಯುವ ಕಥನಗಳನ್ನು ನಾವು ಅರಸಬೇಕಾಗಿದೆ, ಇರಿಸಿಕೊಳ್ಳಬೇಕಾಗಿದೆ. ವೇಗದ ಯುಗದ ಓಟದ ನಡುವೆ ಈ ದಾರಿ ಸಾವಧಾನದ್ದಾಗಿದೆ.

ಹೊಸ ತಲೆಮಾರಿನ ಲೇಖಕಿ. ಹೊಳೆನರಸೀಪುರದ ಸರ್ಕಾರಿ ಗೃಹವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕಿ. 'ನಿಲ್ಲಿಸಬೇಡ ಕಾಯುವುದನ್ನು' ಅವರ ಕವನ ಸಂಗ್ರಹ.